2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 111/2017

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಶ್ವನಾಥ ಯಾನೆ ವಿಶ್ವ | ಪಿಡಬ್ಲೂ -04 |
| ತಂದೆಯ ಹೆಸರು | - | ಷಣ್ಮುಗಪ್ಪ | ಸಿಡಬ್ಲೂ -04 |
| ವಯಸ್ಸು | - | 30 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಕಲ್ಯಾಣಿನಗರ, ಕಡೂರು ತಾ. | |

ದಿನಾಂಕಃ 03.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಈ ಪ್ರಕರಣದ ಆರೋಪಿತರು ಗೊತ್ತು, ನಮ್ಮ ದಾಯಾದಿಗಳು. ಚಾಸಾ.1 ಮತ್ತು 2 ಗೊತ್ತು. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ.

2. ಈಗ ತೋರಿಸಿದ ನಿಪಿ.16 ಮಹಜರಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸ ಲಾಯಿತು. ಈಗ ನೋಡುತ್ತಿರುವ ನಿಪಿ.14 ಮತ್ತು 15 ರ ಫೋಟೋಗಳಲ್ಲಿ ನಾನು ಕೂಡ ಇದ್ದೇನೆ. ನಿಪಿ.16 ಪಂಚನಾಮೆ ಹಾಗೂ ನಿಪಿ.14 ಮತ್ತು 15 ನ್ನು ಎಲ್ಲಿ ಸಂಗ್ರಹಿಸಿದರು ಎಂದು ನನಗೆ ಗೊತ್ತಿಲ್ಲ. ಸುಮಾರು 6 ವರ್ಷದ ಹಿಂದೆ ಪೋಲೀಸರು ಯಾವುದೇ ಸ್ಥಳದಲ್ಲಿ ನನ್ನ ಸಹಿ ಪಡೆದಿದ್ದಾರೆ ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ.

3. ಈಗ ತೋರಿಸಿದ ನೋಟೀಸು ಹಾಗೂ ಮಹಜರಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿ ಗುರುತಿಸಿದ ನೋಟೀಸನ್ನು ನಿಪಿ.18 ಎಂದು, ಸ್ವತ್ತು ಸ್ವಾಧೀನ ಮಹಜರನ್ನು ನಿಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.18(ಎ) ಮತ್ತು 19(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಾಲ್ಕು ಪೋಟೋಗಳಲ್ಲಿ ನಾನು ಕೂಡ ಇದ್ದೇನೆ. ಸದರಿ ಪೋಟೋಗಳನ್ನು ನಿಪಿ.20 ರಿಂದ 23 ಎಂದು ಗುರುತಿಸಲಾಯಿತು. ನಾನು ಕೆಲಸ ಮಾಡುವಾಗ ಪೋಲೀಸರು ನಿಪಿ.20 ರಿಂದ 23ರ ಪೋಟೋಗಳನ್ನು ತೆಗೆದಿದ್ದಾರೆ. ನಿಪಿ.18 ಮತ್ತು 19 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಪೋಲೀಸರು ಅಮಾನತುಪಡಿಸಿಕೊಂಡಿಲ್ಲ. ನಾನು ಪೋಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 11.09.2016 ರಂದು ನಾನು ಕಡೂರು ಪೋಲೀಸರಲ್ಲಿ ಗಲಾಟೆ ವಿಚಾರದಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ 05.09.2016 ರಂದು ಬೆಳಿಗ್ಗೆ 8.00 ಗಂಟೆಗೆ ನಮ್ಮ ತೋಟಕ್ಕೆ ಹೋದಾಗ ಪಕ್ಕದಲ್ಲಿ ಚಾಸಾ.2 ರವರ ತೋಟ ಇದ್ದು ಅಲ್ಲಿ ಜಮೀನಿನ ಬದುವಿನ ವಿಚಾರದಲ್ಲಿ ಆರೋಪಿತರು ಹಾಗೂ ಚಾಸಾ.2 ರವರು ಜಗಳಮಾಡಿಕೊಳ್ಳುತ್ತಿದ್ದರು, ಬೆಳಿಗ್ಗೆ

ಸುಮಾರು 10.30 ಕ್ಕೆ ಚಾಸಾ.2 ರವರಿಗೆ 1 ಮತ್ತು 2 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ಚಾಸಾ.2 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕೊಡಲಿಯ ಹಿಂಬಾಗದಿಂದ ಚಾಸಾ.2 ರವರ ಎಡಗಾಲಿಗೆ ಹೊಡೆದು, 2 ನೇ ಆರೋಪಿ ಸಹ ಕೊಲೆ ಮಾಡುವ ಉದ್ದೇಶದಿಂದ ಚಾಸಾ.2 ರವರಿಗೆ ತನ್ನ ಕೈಯಲ್ಲಿದ್ದ ಕುಡುಗೋಲಿನ ಹಿಂಬದಿಯಿಂದ ಕಾಲುಗಳಿಗೆ ಹೊಡೆದು ಇಬ್ಬರು ಕಾಲುಗಳಿಂದ ತುಳಿದಿದ್ದಾರೆ ಎಂದು, 5 ನೇ ಆರೋಪಿ ಚಾಸಾ.2 ರವರನ್ನು ಬಿಡಬೇಡಿ ಸಾಯಿಸಿ ಎಂದು ಕುಮ್ಮಕ್ಕು ಕೊಡುತ್ತಿದ್ದು, ಆಗ ನಾವೆಲ್ಲರೂ ಜಗಳ ಬಿಡಿಸಿದ್ದೆವು ಎಂದು ಈಗ ಓದಿ ಹೇಳಿದಂತೆ ನಿಪಿ.24 ರಂತೆ ಪೋಲೀಸರಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

5. ದಿಃ 11.09.2016 ರಂದು ಸಂಜೆ 5.00 ರಿಂದ 6.00 ಗಂಟೆಯವರೆಗೆ ಪೋಲೀಸರು ನಿಪಿ.16 ರಂತೆ ಮಹಜರು ಮಾಡಿದಾಗ, ನಾನೇ ಕೃತ್ಯ ಸ್ಥಳವನ್ನು ತೋರಿಸಿ ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.14 ಮತ್ತು 15 ರಂತೆ ಪೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

6. ದಿಃ 23.11.2016 ರಂದು ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಪೋಲೀಸರು 1 ಮತ್ತು 2 ನೇ ಆರೋಪಿತರು ತಮ್ಮ ಮನೆಗೆ ಹೊಂದಿಕೊಂಡಿರುವ ತೆಂಗಿನ

ಕಾಯಿಗಳನ್ನು ಸಂಗ್ರಹಿಸುವ ಸ್ಥಳದಲ್ಲಿ ಒಂದು ಕುಡುಗೋಲು ಹಾಗೂ ಕಬ್ಬಿಣದ ಕೊಡಲಿಯನ್ನು ಅಮಾನತುಪಡಿಸಿಕೊಂಡು ನಿಪಿ.19 ಮಹಜರು ಮಾಡಿ, ಆ ಸಮಯದಲ್ಲಿ ನಿಪಿ.20 ರಿಂದ 23 ರಂತೆ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ನಿಪಿ.18 ರಂತೆ ನೋಟೀಸನ್ನು ಪೋಲೀಸರು ನೀಡಿದ್ದಾರೆ ಎಂದರೆ ಸರಿಯಲ್ಲ.

7. ಆರೋಪಿತರು ನನ್ನ ದಾಯಾದಿಗಳಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿ</u>

8. ಚಾಸಾ.1 ಮತ್ತು 2 ರವರು ನಮ್ಮ ಸಂಬಂಧಿಕರು. ಚಾಸಾ.2 ನನ್ನ ತಂದೆಯ ಸಹೋದರ.

ಐದನೇ ಆರೋಪಿತರ ಪರ ವಕೀಲರು **1** ರಿಂದ **3** ನೇ ಪರ ಆರೋಪಿತರು ಮಾಡಿದ ಪಾಟೀ ಸವಾಲನ್ನೆ ಅಳವಡಿಸಿಕೊಂಡಿದ್ದಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ